**ಕರ್ನಾಟಕ ಸರ್ಕಾರ**

**ಖಜಾನೆ ಇಲಾಖೆ**

**ಖಜಾನೆ ಆಯುಕ್ತರ ಕಚೇರಿ, ಕೆ.ಪಿ.ಸಿ.ಎಲ್ ಹಸಿರು ಕಟ್ಟಡ, 5&6ನೇ ಮಹಡಿ, ಅರಮನೆ ರಸ್ತೆ, ಬೆಂಗಳೂರು-560001**

**ಸಂಖ್ಯೆ: DOT-TNMC0MIS(MIS)/22/2026-O/O TNMC-DOT/E- 2200697** **ದಿ: 19.06.2026**

**ಸುತ್ತೋಲೆ – 202**

**ವಿಷಯ:** ರಾಜ್ಯವಲಯದ ಎಲ್ಲಾ ಸರ್ಕಾರಿ ನೌಕರರ ವೇತನವನ್ನು ರಾಜ್ಯ ಕೇಂದ್ರೀಯ ಪಾವತಿ ಖಜಾನೆ ಹಾಗೂ ಜಿಲ್ಲಾವಲಯದ ಎಲ್ಲಾ ಸರ್ಕಾರಿ ನೌಕರರ ವೇತನವನ್ನು ಕೇಂದ್ರೀಕೃತವಾಗಿ ಸಂಬಂಧಿಸಿದ ಜಿಲ್ಲಾ/ಉಪಖಜಾನೆಗಳು ವೇತನ ಮತ್ತು ಲೆಕ್ಕಪತ್ರದ ಕಚೇರಿಯ (PAO) ಪಾತ್ರದಲ್ಲಿ ಸೆಳೆದು ವಿತರಿಸುವ ಕುರಿತು.

**ಉಲ್ಲೇಖ:-** ಸರ್ಕಾರದ ಆದೇಶ ಸಂಖ್ಯೆ ಆಇ 12 ಟಿಎಆರ್ 2026, ಬೆಂಗಳೂರು ದಿನಾಂಕ: 18.06.2026

*******

ವೇತನ ಬಿಲ್ಲುಗಳ ಯಶಸ್ವಿ ಡಿಜಿಟಲೀಕರಣ ಹಾಗೂ ಹೆಚ್‌ಆರ್‌ಎಂಎಸ್ 2.0 ಮತ್ತು ಖಜಾನೆ 2 ನಡುವಿನ ತಡೆರಹಿತ ಸಂಯೋಜನೆಯ ಹಿನ್ನೆಲೆಯಲ್ಲಿ ಹಾಗೂ ವೇತನ ವಿತರಣೆಯಲ್ಲಿ ಕಾರ್ಯಕ್ಷಮತೆ ಮತ್ತು ಸಮಯೋಚಿತತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಮಹತ್ತರವಾದ ತೀರ್ಮಾನವನ್ನು ಕೈಗೊಂಡಿದೆ. ಪ್ರಸ್ತುತ ಡಿಡಿಓರವರು ಅವರ ವ್ಯಾಪ್ತಿಯಲ್ಲಿನ ಸರ್ಕಾರಿ ಅಧಿಕಾರಿ ಹಾಗೂ ನೌಕರರ ವೇತನ ಮತ್ತು ಭತ್ಯೆಗಳನ್ನು ಸೆಳೆದು ವಿತರಿಸುವ ಸಾಂಪ್ರದಾಯಿಕ ವ್ಯವಸ್ಥೆಯ ಬದಲಾಗಿ, ಇನ್ನು ಮುಂದೆ ಹೆಚ್‌ಆರ್‌ಎಂಎಸ್ 2.0 ರಲ್ಲಿ ಇಲಾಖಾ ಡಿಡಿಓ (DDO) ಗಳಿಂದ ಪರಿಶೀಲಿಸಿ ಅನುಮೋದಿಸಲ್ಪಟ್ಟ ವೇತನಗಳನ್ನು ನಿಗದಿತ ವೇಳಾಪಟ್ಟಿಯಂತೆ, ವೇತನ ಮತ್ತು ಲೆಕ್ಕಪತ್ರದ ಕಚೇರಿಯ (PAO) ಮಾದರಿಯಲ್ಲಿ ಕೇಂದ್ರೀಕೃತವಾಗಿ ಇ-ಪಾವತಿ ಮೂಲಕ ನೇರವಾಗಿ ನೌಕರರ ಬ್ಯಾಂಕ್ ಖಾತೆಗೆ ಜಮೆ ಮಾಡಲು ಉದ್ದೇಶಿಸಲಾಗಿದೆ. ಈ ಕುರಿತಾದ ವಿವಿಧ ಭಾಗೀದಾರರ ಕರ್ತವ್ಯಗಳು ಮತ್ತು ಕಾರ್ಯ ವಿಧಾನದ ವಿವರಗಳನ್ನು ಲಗತ್ತಿಸಲಾದ ಸರ್ಕಾರದ ಆದೇಶದಲ್ಲಿ ನೀಡಲಾಗಿದೆ.

ಮೇಲ್ಕಂಡ ನೂತನ ವಿಧಾನವನ್ನು ಪ್ರಾಯೋಗಿಕವಾಗಿ ಜೂನ್ 2026 ಮಾಹೆ ಹಾಗೂ ಮುಂದಿನ ಮಾಹೆಗಳ ವೇತನಗಳ ಪಾವತಿಗಾಗಿ ಜಾರಿಗೊಳಿಸಲು ಆದೇಶಿಸಲಾಗಿದೆ. ರಾಜ್ಯವಲಯದ ವೇತನಗಳಿಗಾಗಿ ಖಜಾನೆ ಇಲಾಖೆ, ವಾಣಿಜ್ಯ ತೆರಿಗೆಗಳ ಇಲಾಖೆ ಹಾಗೂ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗಳಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತಿದ್ದು, ಇವುಗಳ ವೇತನವನ್ನು ಬೆಂಗಳೂರಿನ ರಾಜ್ಯ ಕೇಂದ್ರೀಯ ಪಾವತಿ ಖಜಾನೆಯ ಮೂಲಕ ಕೇಂದ್ರೀಕೃತವಾಗಿ ನಿರ್ವಹಿಸಲಾಗುವುದು.

ಇದೇ ರೀತಿ ಜಿಲ್ಲಾವಲಯದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ವೇತನಗಳಿಗಾಗಿ ಬಳ್ಳಾರಿ, ಕಲಬುರಗಿ, ಶಿವಮೊಗ್ಗ, ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತಿದ್ದು, ಸಂಬಂಧಿಸಿದ ಜಿಲ್ಲಾ ಅಥವಾ ಉಪಖಜಾನೆಗಳು ವೇತನ ಮತ್ತು ಲೆಕ್ಕಪತ್ರದ ಕಚೇರಿಯ (PAO) ಪಾತ್ರದಲ್ಲಿ ಈ ವೇತನವನ್ನು ಕೇಂದ್ರೀಕೃತವಾಗಿ ಸೆಳೆದು ವಿತರಿಸಲಿವೆ.

ಸರ್ಕಾರದ ಆದೇಶದಲ್ಲಿ ಆದೇಶಿಸಿರುವಂತೆ, ಪ್ರಾಯೋಗಿಕ ಯೋಜನೆಗೆ ಒಳಪಡುವ ಇಲಾಖೆಗಳ ಡಿಡಿಓರವರು ಹೆಚ್‌ಆರ್‌ಎಂಎಸ್ 2.0 ರಲ್ಲಿ ವೇತನ ವಿವರಗಳನ್ನು ನಿಖರವಾಗಿ ಪರಿಶೀಲಿಸಿ ನಿಗದಿತ ವೇಳಾಪಟ್ಟಿಯೊಳಗೆ ಅನುಮೋದಿಸತಕ್ಕದ್ದು. ಸಂಬಂಧಪಟ್ಟ ಖಜಾನೆಗಳು ಈ ಬಿಲ್ಲುಗಳನ್ನು ಆನ್‌ಲೈನ್‌ನಲ್ಲಿ ಸ್ವೀಕರಿಸಿ, ನಿಯಮಾನುಸಾರ ಪರಿಶೀಲಿಸಿ, ಇ-ಪಾವತಿ ಪ್ರಕ್ರಿಯೆಯನ್ನು ಸಂಸ್ಕರಿಸುವಂತೆ ಸೂಚಿಸಿದೆ. ಈ ಪ್ರಾಯೋಗಿಕ ಯೋಜನೆಯು ಯಶಸ್ವಿಯಾದ ನಂತರ ಉಳಿದ ಎಲ್ಲಾ ಪಿಎಓಗಳಿಗೆ (ಖಜಾನೆಗಳು) ಈ ವ್ಯವಸ್ಥೆಯನ್ನು ವಿಸ್ತರಿಸಲಾಗುವುದು.

Digitally signed by
RAGHUNANDAN MURTHY
Date: 19-06-2026
13:28:31

ಖಜಾನೆ ಆಯುಕ್ತರು
ಬೆಂಗಳೂರು

ಪ್ರತಿಯನ್ನು :

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
4. ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರು.
5. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
6. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
7. ಯೋಜನಾ ನಿರ್ದೇಶಕರು HRMS , 5ನೇ ಮಹಡಿ, ಕೆ.ಪಿ.ಸಿ.ಎಲ್., ಗ್ರೀನ್ ಕಟ್ಟಡ, ಔಷಧ ನಿಯಂತ್ರಣ ಆವರಣ ಬೆಂಗಳೂರು-560001.
8. ನಿರ್ದೇಶಕರು, 5ನೇ ಮಹಡಿ, ಕೆಪಿಸಿಎಲ್ ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-560001.
9. ವಿಶೇಷಾಧಿಕಾರಿಗಳು, ಆರ್ಥಿಕ ಇಲಾಖೆ (ಎಫ್‌ಆರ್‌ಸಿ & ಸಿಸಿ).
10. ಅಧೀನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು)
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.
12. ರಾಜ್ಯದ ಎಲ್ಲಾ ಖಜಾನಾಧಿಕಾರಿಗಳಿಗೆ ಹಾಗೂ ಪ್ರಾಯೋಗಿಕ ಯೋಜನೆಗೆ ಒಳಪಡುವ ಸಂಬಂಧಪಟ್ಟ ಇಲಾಖಾ ಡಿಡಿಓಗಳಿಗೆ ಸೂಕ್ತ ಕ್ರಮಕ್ಕಾಗಿ